# ದಿನಾಂಕ : 24.02.2021 ರಂದು ಮಧ್ಯಾಹ್ನ 4.00 ಗಂಟೆಗೆ ವಾರ್ಡ್-80 ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-80 ಹೊಯ್ಸಳನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ : 24.02.2021 ರಂದು ಮಧ್ಯಾಹ್ನ 4.00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಎಂ.ಲೋಕೇಶ್ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-80
2. ಶ್ರೀ.ಲಿಂಗರಾಜೇಗೌಡ –ಸಹಾಯಕ ಅಭಿಯಂತರರು (ಸದಸ್ಯ ಕಾರ್ಯದರ್ಶಿ)
3. ಶ್ರೀಮತಿ.ಚಿತ್ರಾ – ಹಿರಿಯ ಆರೋಗ್ಯ ನೀರಿಕ್ಷಕರು
4. ಶ್ರೀ.ಶಿವೇಗೌಡ – ಆರೋಗ್ಯ ವೈದ್ಯಾಧಿಕಾರಿಗಳು (ಸಿ.ವಿ.ರಾಮನ್‌ನಗರ ವಲಯ)
5. ಶ್ರೀ.ರುದ್ರಮುನಿ – ಎಇ, ಬೆಸ್ಕಾಂ
6. ಶ್ರೀ.ನವೀನ್ – ಕಿ.ಆ.ಪ
7. ಶ್ರೀ.ಆನಂದ್ – ಸದಸ್ಯರು
8. ಶ್ರೀ.ವೇಣು.ಪಿ.ಎನ್ – ಸದಸ್ಯರು
9. ಶ್ರೀ.ವೆಂಕಟೇಶ್ – ಸದಸ್ಯರು
10. ಶ್ರೀ.ಅಶೋಕ ಶರತ್ – ಸದಸ್ಯರು
11. ಶ್ರೀ.ಬಾಬುಕುಮಾರ್ – ಸದಸ್ಯರು
12. ಶ್ರೀ.ಕಾರ್ಮೇಗಂ – ಸದಸ್ಯರು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ಸಿ.ಲಿಂಗರಾಜೇ ಗೌಡರವರು ಸಭೆಗೆ ಆಗಮಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಾಗೂ ಹಿಂದಿನ ಸಭೆಯ ನಡವಳಿಗಳನ್ನು ಸಭೆಗೆ ಓದಿ ತಿಳಿಸಿದರು ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು. ಹಾಗೂ ವಾರ್ಡ್ ಸಮತಿಗೆ ಆಯ್ಕೆ ಮಾಡಲಾಗಿರುವ ಸದಸ್ಯರುಗಳ ಪಟ್ಟಿಯನ್ನು ಸಭೆಗೆ ತಿಳಿಸಿದರು.

ಹೆಚ್.ಎ.ಎಲ್ 2ನೇ ಹಂತಹ ರೆಸಿಡೆಂಟ್ ವೆಲ್ಫೇರ್ ಅಸೋಸಿಯೇಶನ್‌ನ ಶ್ರೀ.ನಾಯ್ಡುರವರು ದೂರನ್ನು ತಿಳಿಸುತ್ತಾ, ವಾರ್ಡ್ ವ್ಯಾಪ್ತಿಯಲ್ಲಿನ ನಕ್ಷೆಗೆ ವ್ಯತಿರಿಕ್ತವಾಗಿರುವ ಹಾಗೂ ಕಾನೂನು ಬಾಹಿರವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಪಟ್ಟಿಯನ್ನು ನೀಡಲು ಮತ್ತೊಮ್ಮೆ ಕೋರಿರುತ್ತಾರೆ. ಇದಕ್ಕೆ ಈಗಾಗಲೇ ಹದಿನೈದು ದಿನಗಳಾಗಿದ್ದು, ಇನ್ನು ಹದಿನೈದು ದಿನಗಳೊಳಗಾಗಿ ಸರ್ವೇ ಮಾಡಿ ಮಾಹಿತಿ ಒದಗಿಸುವುದಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.



Scanned with CamScanner

- ಶ್ರೀ.ಬಾಬುಕುಮಾರ್‌ರವರು ಮಾತನಾಡುತ್ತಾ, ವಾರ್ಡ್ 80ರ ವ್ಯಾಪ್ತಿಯ 1) ಆಸ್ತಿ ಸಂಖ್ಯೆ : 197/4, ಬ್ಲೂ ವೈನ್ಸ್ ಬೇಸ್‌ಮೆಂಟ್ ಶಾಪ್, ಡಬಲ್ ರಸ್ತೆ, ಬೆಂಗಳೂರು, 2) 74/1, ಹಟ್ಟಿಂಗ್ ಕಾಲೊನಿ, ವಾರ್ಡ್ ನಂ. ಹೊಯ್ಸಳನಗರ, ಬೆಂಗಳೂರು ಸ್ವತ್ತುಗಳಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡಗಳು ನಕ್ಷೆಗೆ ವ್ಯತಿರಿಕ್ತವಾಗಿ ಹಾಗೂ ಅನಧಿಕೃತವಾಗಿ ನಿರ್ಮಾಣವಾಗುತ್ತಿದ್ದು, ಕ್ರಮ ಕೈಗೊಳ್ಳಲು ಮತ್ತೊಮ್ಮೆ ಕೋರಿರುತ್ತಾರೆ. ಇದಕ್ಕೆ ಸಹಾಯಕ ಅಭಿಯಂತರರು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿರುತ್ತಾರೆ.
- ಹೊಸ ಬಿನ್ನಮಂಗಲದ ನಿವಾಸಿಗಳು ಹೊಸದಾಗಿ ಕಮ್ಯುನಿಟಿ ಶೌಚಾಲಯ ನಿರ್ಮಿಸಲು, ಸಿಸಿ ಕ್ಯಾಮೆರಾ ಅಳವಡಿಸಲು, ಜಿಮ್ ಕಟ್ಟಡ ನಿರ್ಮಿಸಲು, ಸರ್ಕಲ್ ಬಳಿ ಹೈಮಾಸ್ಕ್ ಲೈಟ್ ಅಳವಡಿಸಲು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು, ಕಸದ ನಿರ್ವಹಣೆಯನ್ನು ಸಮರ್ಪಕವಾಗಿ ಕೈಗೊಳ್ಳುವಂತೆ ಮತ್ತೊಮ್ಮೆ ಕೋರಿರುತ್ತಾರೆ. ಈ ಸಂಬಂಧ ಅನುದಾನದ ಲಭ್ಯತೆಯ ಬಗ್ಗೆ ಪರಿಶಿಲಿಸಲಾಗುವುದು ಎಂದು ತಿಳಿಸಲಾಯಿತು.
- ಮರ್ಫಿಟೌನ್ ಮಾರ್ಕೆಟ್ ಎದುರಿನ ಪಾರ್ಕ್‌ನ ಸ್ವಚ್ಛತೆಯನ್ನು ಕೈಗೊಳ್ಳಲು ಮರ್ಫಿಟೌನ್ ನಿವಾಸಿಗಳು ಮತ್ತೊಮ್ಮೆ ಕೋರಿರುತ್ತಾರೆ. ಈ ಬಗ್ಗೆ ಕ್ರಮ ವಹಿಸುವಂತೆ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.
- ಮರ್ಫಿಟೌನ್ ನಿವಾಸಿಗಳು ಮಾತನಾಡಿ, ನಾಲಾ ರಸ್ತೆಯಲ್ಲಿ ಡೆಬ್ರಿಸ್ ತೆರವುಗೊಳಿಸಲು ಹಾಗೂ 4ನೇ ಸ್ಕ್ವೇರ್ ಮತ್ತು 5ನೇ ಸ್ಕ್ವೇರ್‌ನಲ್ಲಿ ಡೆಬ್ರಿಸ್ ತೆರವುಗೊಳಿಸಲು ಕೋರಿದರು. ಈ ಬಗ್ಗೆ ಕ್ರಮ ವಹಿಸುವಂತೆ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.
- ಮರ್ಫಿಟೌನ್ ಅನಂತ್‌ನಾಯರ್ ರಸ್ತೆಯಲ್ಲಿರುವ ಮೀನಿನ ಮಾರಾಟ ಅಂಗಡಿಯನ್ನು ಬಂದ್ ಮಾಡಿಸುವಂತೆ ನಿವಾಸಿಗಳು ಕೋರಿದರು. ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸುವುದಾಗಿ ಆರೋಗ್ಯ ವೈದ್ಯಾಧಿಕಾರಿಗಳು ತಿಳಿಸಿದರು.
- ಶ್ರೀ.ಅಶೋಕ್ ಶರತ್‌ರವರು ಮಾತನಾಡಿ, ವಾರ್ಡ್‌ನಲ್ಲಿರುವ 25 ಪಬ್‌ಗಳಲ್ಲಿ 6 ರೂಫ್‌ಟಾಫ್‌ಗಳಿದ್ದು, ಇದರ ಅನುಮತಿಯ ಬಗೆಗಿನ ವಿವರಗಳನ್ನು ನೀಡಲು ಈಗಾಗಲೇ ಕೋರಿರುವ ಬಗ್ಗೆ ತಿಳಿಸಿದರು. ಆರೋಗ್ಯ ವೈದ್ಯಾಧಿಕಾರಿಗಳು ಮುಂದಿನ ಸಭೆಗೆ ವಿವರಗಳನ್ನು ಒದಗಿಸುವುದಾಗಿ ತಿಳಿಸಿದರು.
- ಶ್ರೀ.ಅಶೋಕ್ ಶರತ್‌ರವರು ಮಾತನಾಡುತ್ತಾ, ವಾರ್ಡಿನಲ್ಲಿ ವಸತಿ ಪ್ರದೇಶದಲ್ಲಿ ಕಾನೂನು ಬಾಹಿರವಾಗಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿರುವ ಬಗ್ಗೆ ಸರ್ವೇ ನಡೆಸಿ ವರದಿ ನೀಡಲು ಕೋರಿದ ಮೇರೆಗೆ, ಒಂದು ತಿಂಗಳೊಳಗೆ ಸರ್ವೇ ನಡೆಸಿ ವರದಿ ನೀಡಲಾಗುವುದು ಎಂದು ಆರೋಗ್ಯ ವೈದ್ಯಾಧಿಕಾರಿಗಳು ತಿಳಿಸಿದರು.
- ವಾರ್ಡಿನಲ್ಲಿ ಹಲವು ಕಡೆಗಳಲ್ಲಿ ಅಂದರೆ, ರಸ್ತೆ, ಪಾರ್ಕ್ ಪಕ್ಕ, ಮುಂತಾದ ಕಡೆಗಳಲ್ಲಿ ಡೆಬ್ರಿಸ್ ಇದ್ದು, ಅದನ್ನು ತೆರವುಗೊಳಿಸಲು ಹಾಗೂ ವಾರ್ಡಿನ ಎಲ್ಲಾ ರಸ್ತೆಗಳ ಚರಂಡಿಗಳಲ್ಲಿನ ಹೂಳು ತೆಗೆಯಲು ಕೋರಿದರು.
- ವಾರ್ಡಿನ 80 ಅಡಿ ರಸ್ತೆಯ ಹಲವು ಕಡೆ ಲೈಟ್‌ಗಳನ್ನು ಹೊಸದಾಗಿ ಅಳವಡಿಸಲು ಕೋರಿದರು. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಲಾಯಿತು.



Scanned with CamScanner

- ಪ್ರಾಥಮಿಕ ಆರೋಗ್ಯ ಕೇಂದ್ರ ಮರ್ಫಿಟೌನ್ ಇಲ್ಲಿ ಬೀಫ್ ಮಾರಾಟ ಮಾಡುವ ಅಂಗಡಿಯನ್ನು ಅನಧಿಕೃತವಾಗಿ ನಡೆಸುತ್ತಿದ್ದು, ಇದನ್ನು ತೆರವುಗೊಳಿಸಲು ಸದಸ್ಯರು ಕೋರಿದರು. ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು.
- ಶಿವರಾತ್ರಿ ಹಬ್ಬದ ಪ್ರಯುಕ್ತ ಸಾವಿರಾರು ಸಂಖ್ಯೆಯಲ್ಲಿ ಲಕ್ಷ್ಮೀಪುರ ಹಿಂದೂ ರುದ್ರಭೂಮಿಯಲ್ಲಿ ಭಕ್ತಾದಿಗಳು ಸೇರುವುದರಿಂದ ಸ್ವಚ್ಛತಾ ಕೆಲಸ ಕೈಗೊಳ್ಳುವಂತೆ ಸದಸ್ಯರು ತಿಳಿಸಿದರು. ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿರುತ್ತಾರೆ.
- ಮರ್ಫಿಟೌನ್‌ನಲ್ಲಿ ವಿದ್ಯುತ್ ಲೈನ್ ಮೇಲೆ ಮರದ ರೆಂಬೆಗಳು ಚಾಚಿದ್ದು, ಅವುಗಳನ್ನು ಕಡಿದು ತೆರವುಗೊಳಿಸಲು ಸದಸ್ಯರಾದ ಕುಮಾರ್‌ರವರು ಕೋರಿದರು. ಇದನ್ನು ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳ ಗಮನಕ್ಕೆ ತರಲಾಗಿದ್ದು, ಅವರು ಒಪ್ಪಿರುತ್ತಾರೆ.
- ಒಂಟಿ ಮನೆ ಫಲಾನುಭವಿಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ನೀಡುವಂತೆ ಪುನಃ ಸದಸ್ಯರಾದ ಕುಮಾರ್‌ರವರು ಕೋರಿದರು. ಮುಂದಿನ ಸಭೆಯೊಳಗಾಗಿ ವಿವರಗಳನ್ನು ನೀಡುವುದಾಗಿ ಹಾಜರಿದ್ದ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.
- ಮರ್ಫಿಟೌನ್‌ನ ತಾಮರೈಕಣ್ಣನ್ ರಸ್ತೆಯಲ್ಲಿ ಕಲ್ವರ್ಟ್ ನಿರ್ಮಿಸಲು ಹಾಗೂ ಚರಂಡಿಯಲ್ಲಿ ಟ್ರಾನ್ಸ್‌ಫಾರ್ಮರ್ ಇದ್ದು ಇದನ್ನು ಬೇರೆಡೆ ಸ್ಥಳಾಂತರಿಸುವಂತೆ ಸದಸ್ಯರಾದ ಕುಮಾರ್‌ರವರು ಕೋರಿದರು. ಈ ಬಗ್ಗೆ ಪರಿಶೀಲಿಸುವಂತೆ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.
- ರಾತ್ರಿ ವೇಳೆಯಲ್ಲಿ ಪಬ್‌ಗಳಲ್ಲಿ ದೊಡ್ಡದಾಗಿ ಸಂಗೀತಗಳನ್ನು ಹಾಕುತ್ತಿದ್ದು, ಇದರಿಂದಾಗಿ ಅಕ್ಕಪಕ್ಕದ ನಿವಾಸಿಗಳಿಗೆ ಶಬ್ಧಮಾಲಿನ್ಯದಿಂದಾಗಿ ತೊಂದರೆಯಾಗುತ್ತಿದ್ದು, ಈ ಬಗ್ಗೆ ಕ್ರಮವಹಿಸುವಂತೆ ಪೊಲೀಸ್‌ರವರಿಗೆ ಕೋರಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಪೊಲೀಸ್ ಇಲಾಖೆಯವರು ರಾತ್ರಿ ವೇಳೆ ಸದರಿ ಪ್ರದೇಶಗಳಲ್ಲಿ ಗಸ್ತು ತಿರುಗಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.
- ವಾರ್ಡಿನಲ್ಲಿರುವ ಎಲ್ಲಾ ಪಾರ್ಕ್‌ಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸದಸ್ಯರುಗಳು ಕೋರಿದರು. ಈ ಬಗ್ಗೆ ಅನುದಾನದ ಲಭ್ಯತೆಯನ್ನು ಪರಿಶೀಲಿಸಿ, ಅನುದಾನ ಲಭ್ಯವಿದ್ದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿ ಕ್ರಮವಹಿಸಲಾಗುವುದು ಎಂದು ತಿಳಿಸಲಾಯಿತು.

ಮೇಲ್ಕಂಡಂತೆ ತಿಳಿಸಲಾಗಿರುವ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕ್ರಮವಹಿಸಲು ಹಾಗೂ ಸಮಿತಿಯ ಸದಸ್ಯರು ಕೋರಿರುವ ವಿವರಗಳನ್ನು ಮುಂದಿನ ವಾರ್ಡ್ ಸಮಿತಿಯ ಸಭೆಗೆ ಒದಗಿಸುವಂತೆ ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

24/1/21

**ಕಾರ್ಯದರ್ಶಿಗಳು**
**ವಾರ್ಡ್ ಸಮಿತಿ-80**

**ಅಧ್ಯಕ್ಷರು**
**ವಾರ್ಡ್ ಸಮಿತಿ, ವಾರ್ಡ್ 80**
**ಹಾಗೂ ನೋಡಲ್ ಅಧಿಕಾರಿಗಳು,**
**ವಾರ್ಡ್ 80**



Scanned with CamScanner